# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ, ಬೆಂಗಳೂರು

---

ಸಂ: ಸ.ಅ/ವಾ-161/2022-23

ದಿನಾಂಕ : 05/08/2022

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :05-08-2022 ರಂದು ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮತಿ ಸಭೆಯ ನಡವಳಿಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ :05-08-2022 ರಂದು ವಾರ್ಡ್ ಕಛೇರಿಯಲ್ಲಿ ಬೆಳಿಗ್ಗೆ 11.30 ಗಂಟೆಗೆ ಶ್ರೀ ಧರಣೇಂದ್ರಕುಮಾರ್ ನೋಡೆಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಕೀರ್ತಿ.ಹೆಚ್.ಆರ್ ಸದಸ್ಯ ಕಾರ್ಯದರ್ಶಿ ರವರ ಕಾರ್ಯಾಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿರುತ್ತಾರೆ.

ಹಿಂದಿನ ವಾರ್ಡ್ ಸಭೆಯ ನಡವಳಿಗಳನ್ನು ಚರ್ಚಿಸಲಾಗಿರುತ್ತದೆ.

1) ವಾಡ್ ಸಂಖ್ಯೆ-161 ರ ರೆವಿನ್ಯೂ ವಾರ್ಡ್ ಕಛೇರಿಯ ಮೇಲ್ಛಾವಣಿಯು ಸೋರುತ್ತಿದ್ದು, ಅದನ್ನು ಸರಿಪಡಿಸುವಂತೆ ಕಂದಾಯ ಅಧಿಕಾರಿಗಳು ಕೋರಿದಾಗ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ.
2) ಹೊಸಕೆರೆಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದಿದ್ದು, ಅವುಗಳನ್ನು ಕೂಡಲೇ ಸರಿಪಡಿಸುವಂತೆ ಸಾರ್ವಜನಿಕರು ಕೋರಿದಾಗ ವಾರ್ಡ್ ಅಭಿಯಂತರರು ಕ್ರಮ ವಹಿಸುವುದಾಗಿ ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದು ಸಭೆಗೆ ತಿಳಿಸಿರುತ್ತಾರೆ.
3) ಟಿ. ಜಿ ಬಡಾವಣೆಯ 50 ಅಡಿ ರಸ್ತೆಯಲ್ಲಿ ಡುಂಜೋ ಕಂಪನಿಯು ಪ್ರಾರಂಭವಾಗಿದ್ದು, ಸದರಿ ರಸ್ತೆಯಲ್ಲಿ ವಾಹನ ದಟ್ಟಣೆಉಂಟಾಗಿರುವ ಕಾರಣದಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ಸಾರ್ವಜನಿಕರು ಸಭೆಗೆ ತಿಳಿಸಿದಾಗ ಸಂಬಂಧಪಟ್ಟ ಸಂಚಾರಿ ವಿಭಾಗ ಪೋಲೀಸ್ ಅಧಿಕಾರಿಗಳ ಗಮನಕ್ಕೆ ತರುವಂತೆ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿರುತ್ತಾರೆ.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Keerthi. H.R
ವಾರ್ಡ್ ಸಮಿತಿ ಸಂಚಾಲಕರು

S.m. 05/08/2022
ವಾರ್ಡ್ 161 ರ ನೋಡಲ್ ಅಧಿಕಾರಿ.